ದಿನಾಂಕಃ **03.07.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ಆರೋಪಿ ಪರ ಶ್ರೀ ಎನ್.ಕೆ.ಪಿ ವಕೀಲರಿಂದ

**1.** ನಮ್ಮ ಮನೆಯಿಂದ **1**ನೇ ಆರೋಪಿಯ ಮನೆ **10** ಮೀಟರ್ ದೂರದಲ್ಲಿದೆ. ಸುಮಾರು ಐದು ವರ್ಷಗಳಿಂದ ನನ್ನ ಅಣ್ಣ ಚಾಸಾ-**1** ಮತ್ತು **1**ನೇ ಆರೋಪಿ ನಡುವೆ ಜಾಗದ ತಕರಾರು ಇದೆ ಮತ್ತು ಸದರಿ ತಕರಾರು ಈಗಲು ನಡೆಯುತ್ತಿದೆ. ಈ ಹಿನ್ನಲೆಯಲ್ಲಿ ಅವರಿಬ್ಬರ ನಡುವೆ ಆಗಾಗ ಪೋಲಿಸ್ ದೂರುಗಳು ದಾಖಲಾಗುತ್ತಿವೆ ಎಂದರೆ ಸರಿ.

**2.** ನಮ್ಮ ತಾಯಿಯವರ ಸ್ವಂತ ಜಾಗದಲ್ಲಿ ಏಳು ತೆಂಗಿನ ಮರಗಳು ಮತ್ತು ಸುಮಾರು **100–150** ಅಡಿಕೆ ಮರಗಳು ಇವೆ. ಸದರಿ ಮರಗಳನ್ನು **1**ನೇ ಆರೋಪಿ ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಮತ್ತು ಅವರು ಪಡೆದಿಲ್ಲ.

**3.** ನಾನು ಮನೆ ಮನೆಗಳಿಗೆ ಹೋಗಿ ಪೆಂಟಿಂಗ್ ಕೆಲಸ ಮಾಡುತ್ತೇನೆ. ತಕ್ಷಿರು ದಿನ ನಾನು ಪೆಂಟಿಂಗ್ ಕೆಲಸಕ್ಕೆ ಹೋಗಿರಲಿಲ್ಲ. ನಾನು ಮನೆಯಲ್ಲಿ ಇದ್ದೆ. ಚಾಸಾ-**1** ಮತ್ತು ನಾನು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದೇವೆ. ಸುಮಾರು ಐದು ಮೀಟರ್ ದೂರದಲ್ಲಿ ಚಾಸಾ-**1** ರವರ ಮನೆ ಇದೆ. ನಾನು, ನನ್ನ ತಾಯಿ ಮತ್ತು ನನ್ನ ಹಿರಿಯ ಅಣ್ಣ ಹರೀಶ್ ಒಟ್ಟಿಗೆ ವಾಸವಾಗಿದ್ದೇವೆ. ಚಾಸಾ-**1** ರವರ ಒಟ್ಟಿಗೆ, ಆತನ ಹೆಂಡತಿ, ಹೆಂಡತಿಯ ತಂಗಿ ಮತ್ತು ಆಕೆಯ ಗಂಡ ವಾಸವಾಗಿರುತ್ತಾರೆ.

**3.** ಆರೋಪಿತರು ತೆಂಗಿನ ಕಾಯಿಯನ್ನು ತೆಗೆಯಲು ಬಂದಿದ್ದಾಗ ನಾನು ನಮ್ಮ ಮನೆಯ ಹತ್ತಿರ ಇದ್ದೆನು. ನಮ್ಮ ಮನೆಯಿಂದ ಆರೋಪಿತರು ತೆಂಗಿನ ಕಾಯಿಯನ್ನು ತೆಗೆಯಲು ಬಂದಿದ್ದ ತೋಟವು ಸುಮಾರು **10** ಮೀಟರ್ ದೂರದಲ್ಲಿದೆ. ಸಾಕ್ಷಿ ಮುಂದುವರಿದು ನಮ್ಮ ಮನೆಯಿಂದ ಅದು ಕಾಣುತ್ತದೆ ಎಂದು ನುಡಿಯುತ್ತಾರೆ. ಬೆಳಗ್ಗೆ **10.00** ಗಂಟೆಗೆ ತೆಂಗಿನ ಕಾಯಿಯನ್ನು ತೆಗೆಯಲು ಬಂದ ಕೂಡಲೇ ತಕ್ಷಿರು ನಡೆದಿರುತ್ತದೆ. ಆರೋಪಿತರು ತೆಂಗಿನ ಕಾಯಿಯನ್ನು ಕೊಂಡೊಯ್ದಿರುತ್ತಾರೆ. ಆದರೆ ಎಷ್ಟು ಎಂದು ಗೊತ್ತಿಲ್ಲ. ತಕ್ಷಿರು ಸ್ಥಳಕ್ಕೆ ನಾನು **10.15** ಗಂಟೆಗೆ ಹೋಗಿರುತ್ತೇನೆ.

**4.** ತಕ್ಷಿರು ಸ್ಥಳದಲ್ಲಿ ನಾನು ಏನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅತ್ತಿಗೆಗೆ ಕೈಯಿಂದ **1**ನೇ ಆರೋಪಿಯು ಕೆನ್ನೆಗೆ ಹೊಡೆದಿರುತ್ತಾನೆ. ಆರೋಪಿತರೆಲ್ಲರು ಚಾಸಾ-**1** ರವರ ಬೆನ್ನಿಗೆ ಮತ್ತು ಕೆನ್ನೆಗೆ ಹೊಡೆದಿರುತ್ತಾರೆ. ಚಾಸಾ-**1** ರವರ ಹಲ್ಲಿನಿಂದ ರಕ್ತ ಬಂದಿತ್ತು. ಪೋಲಿಸರಿಗೆ ನಾನು ಮಾಹಿತಿ ನೀಡಿರುವುದಿಲ್ಲ. ಆಸ್ಪತ್ರೇಗೆ ನಾನು ಹೋಗಿರುವುದಿಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಆ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳಲಾಗುವ ಸಂದರ್ಬದಲ್ಲಿ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**1** ನನ್ನ ಅಣ್ಣ ದಾಖಲಿಸಿದ ಸಿವಿಲ್ ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**2** ರವರು ಆಸ್ಪತ್ರೇಗೆ ದಾಖಲಾಗಿರುವುದಿಲ್ಲ. ಚಾಸಾ-**2** ರವರಿಗೆ ಯಾವುದೇ ರಕ್ತ ಬರುವ ಗಾಯಗಳಾಗಿರಲಿಲ್ಲ.

**5.** ಆರೋಪಿತರು ಮತ್ತು ನಮ್ಮನ್ನು ಹೊರತುಪಡಿಸಿ ಬೇರೆ ಸಾರ್ವಜನಿಕರು ತಕ್ಷಿರು ಸ್ಥಳದಲ್ಲಿ ನೆರೆದಿರಲಿಲ್ಲ. ತಕ್ಷಿರು ದಿನ ಪೋಲಿಸರು ಸ್ಥಳಕ್ಕೆ ಬಂದಿರಲಿಲ್ಲ. ತಕ್ಷಿರು ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ನಾನು ಇರಲೇ ಇಲ್ಲ ಮತ್ತು ನನ್ನ ಅಣ್ಣ ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**1** ಮತ್ತು ಚಾಸಾ-**2** ರವರಿಗೆ ಯಾವುದೇ ಹಲ್ಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **4** ನೇ ಆರೋಪಿ ಪರ ಶ್ರೀ ಎಸ್.ಎಮ್.ವಿ ವಕೀಲರಿಂದ</u>

**6.** **1**ನೇ ಆರೋಪಿ ನನ್ನ ದೊಡ್ಡಪ್ಪನ ಮಗ. **1**ನೇ ಆರೋಪಿಯ ವಿರುದ್ಧ ನಾನು ಜಾಗದ ವಿಚಾರವಾಗಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇನೆ. ಸದರಿ ದಾವೆಯನ್ನು ನಾನು ಸಲ್ಲಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **1**ನೇ ಆರೋಪಿ ಸಲ್ಲಿಸಿದ ದಾವೆಯಲ್ಲಿ ಚಾಸಾ-**1** ಮತ್ತು ನನ್ನ ವಿರುದ್ಧ ತಡೆಯಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾವೆಯ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ಯಾವುದೇ ಅಡ್ಡಿಯಿಲ್ಲ.

**7.** **4**ನೇ ಆರೋಪಿಯನ್ನು ಕಬಕ ಮತ್ತು ಪುತ್ತೂರು ಕಡೆಗಳಲ್ಲಿ ನೋಡಿ ಪರಿಚಯವಿದೆ. ಪುತ್ತೂರು ಮತ್ತು ಕಬಕ ಕಡೆಗಳಲ್ಲಿ ಅಲ್ಲದೆ ಬೇರೆ ಕಡೆ ನೋಡಿ ಪರಿಚಯ ಇಲ್ಲ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿದು ನಂತರ ಸಾಕ್ಷಿ ತೋಟದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ತಕ್ಷಿರು ನಡೆದ ಮಾರನೆ ದಿನ ನಾನು ಕೆಲಸಕ್ಕೆ ಹೋಗಿರುತ್ತೇನೆ. **1**ನೇ ಆರೋಪಿಯು ನಮ್ಮ ವಿರುದ್ಧ

ತಡೆಯಾಜ್ಞೆ ಆದೇಶದ ಪಡೆದುಕೊಂಡಿದ್ದಾಗಿಯೂ ಸಹ, ಆತನ ಸ್ವತ್ತಿಗೆ ಅತಿಕ್ರಮಣ ಪ್ರವೇಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ಎದುರುಗಡೆ ಚೌಕರ ಮೇರ ಎಂಬುವವರ ಮನೆ ಇದೆ. ಸದರಿ ವ್ಯಕ್ತಿಯು ಸ್ಥಳಕ್ಕೆ ಬಂದಿಲ್ಲ ಮತ್ತು ನೋಡಿಲ್ಲ. ಈ ಪ್ರಕರಣದ ಸಾಕ್ಷಿದಾರರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ-1 ರಿಂದ 3 ಮತ್ತು ನಾನು ಒಂದೇ ಕುಟುಂಬದ ಸದಸ್ಯರು ಎಂದರೆ ಸರಿ. ಚಾಸಾ-5 ನನ್ನ ಅಣ್ಣನ ಒಟ್ಟಿಗೆ ಕೆಲಸ ಮಾಡಿಕೊಂಡಿರುತ್ತಾರೆ. ನಮ್ಮ ಮನೆಯಿಂದ ಸುಮಾರು 200 ಮೀಟರ್ ದೂರದಲ್ಲಿ ಚಾಸಾ-5 ರವರ ಮನೆ ಇದೆ. ಅವರು ನನ್ನ ಆತ್ಮೀಯರು ಎಂದರೆ ಸರಿಯಲ್ಲ.

8. ಚಾಸಾ-5 ಮತ್ತು ಚಾಸಾ-6 ರವರು ನನ್ನ ಆತ್ಮೀಯರು ಮತ್ತು ಚಾಸಾ-1 ರಿಂದ 3 ನಾವು ಒಂದೇ ಕುಟುಂಬದ ಸದಸ್ಯರಾಗಿರುವುದರಿಂದ ನಾವುಗಳು ಶರೀಕರಾಗಿ ಮುಗ್ಧರಾದ ಆರೋಪಿಗಳ ವಿರುದ್ಧ ಸುಳ್ಳು ಕತೆ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಠಾಣೆಗೆ ಹೋಗಿರುವುದಿಲ್ಲ. ಯಾರದೋ ಒತ್ತಡಕ್ಕೆ ಒಳಗಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ